ಸಾಗಿಸುತ್ತಿದ್ದೇವೆ. ಸುಖಕ್ಕಾಗಿ ಹೊರಗಡೆ ಅಂಗಲಾಚುತ್ತಿದ್ದೇವೆ. ಈ ಎಲ್ಲಾ ದೌರ್ಬಲ್ಯಗಳಿಗೆ ಕಾರಣವೆಂದರೆ ಮನಸ್ಸಿನ ವಿಕಾರ. ನಾವೆಲ್ಲ ಇಂದು ಹಲವಾರು ಗ್ರಂಥಗಳನ್ನು ಓದಿಕೊಂಡರೆ, ಜಡವಸ್ತುವಾದ ಕಂಪ್ಯೂಟರ್ ಹಾರ್ಡ್‌ಡಿಸ್ಕ್‌ನಲ್ಲಿರುವಂತೆ ನಾವು ಮಾಹಿತಿಯನ್ನು ತಲೆಯಲ್ಲಿಟ್ಟುಕೊಂಡರೆ, 'ಆಹಾ ಎಷ್ಟು ಬುದ್ಧಿವಂತನೀತ' ಎಂಬ ಉದ್ಗಾರವನ್ನು ಎತ್ತುತ್ತೇವೆ. ನಿಜವಾಗಿಯೂ ಇದು ಬೇಸರದ ಸಂಗತಿ. ಸ್ವಾಮಿ ವಿವೇಕಾನಂದರು ಹೇಳುವಂತೆ ಶಿಕ್ಷಣವೆಂದರೆ ಹಲವು ಪುಸ್ತಕಗಳ ಮಾಹಿತಿಯ ಕಣಜವಲ್ಲ , ಮಾನವನಲ್ಲಿರುವ ದಿವ್ಯತೆಯನ್ನು, (ಆಂತರಿಕ) ಜ್ಞಾನವನ್ನು ಹೊರತರುವುದಕ್ಕಾಗಿ ಇರುವ ವ್ಯವಸ್ಥೆ. ಹೀಗೆ ಇಂದಿನ ಪರಿಸ್ಥಿತಿಯಲ್ಲಿ ಮನಸ್ಸು ಕೇವಲ ಆಸೆಗಳನ್ನು ತುಂಬುವ, ಆಕಾಂಕ್ಷೆಗಳನ್ನು ತುಂಬುವ, ಬೇರೆ ಬೇರೆ ಭಾವನೆಗಳನ್ನು ತುಂಬುವ ಒಂದು ಪಾತ್ರೆಯಾಗಿ ಮಾರ್ಪಾಡಾಗಿದೆ ಎಂಬುದು ವಿದಿತಸತ್ಯವಾಗಿದೆ. ಹಾಗಾದರೆ ಇದು ಯಾವ ರೀತಿಯಲ್ಲಿ ಜಾಗೃತಗೊಳಿಸುವ ಶಕ್ತಿ? ಇದಕ್ಕೆ ಪ್ರಮಾಣವೇನಾದರೂ ಇದೆಯೆ? ಎಂಬುದನ್ನು ಕೆಲವು ಘಟನೆಗಳ, ಮಹಾತ್ಮರ ಉಪನಿಷತ್ತಿನ ವಾಕ್ಯಗಳ ಹಾಗೂ ಅನುಭವದ ಆಧಾರದ ಮೇಲೆ ತಿಳಿಯಬಹುದಾಗಿದೆ.

ಮಹಾಭಾರತದ ಕೊನೆಯಲ್ಲಿ ಬರುವ ಗೀತೋಪದೇಶವು ಮನಸ್ಸಿನ ಮಹತ್ವವನ್ನು ಸಾರುತ್ತದೆ. ನಮ್ಮೆಲ್ಲರ ನಿತ್ಯಸ್ಫೂರ್ತಿಯಾದ, ಭಾರತಾಂಬೆಯ ಧೀರ ಪುತ್ರರಾದ ಸ್ವಾಮಿ ವಿವೇಕಾನಂದರು ತಮ್ಮ ಕೃತಿಶ್ರೇಣಿಯಲ್ಲಿ ಮನಸ್ಸಿನ ಅದಮ್ಯಶಕ್ತಿಯನ್ನು ಬಿಂಬಿಸುವ ಒಂದು ಕಥೆಯನ್ನು ವಿವರಿಸುತ್ತಾರೆ. ಒಂದು ಊರಿನಲ್ಲಿ ಒಬ್ಬ ವ್ಯಕ್ತಿಯಿದ್ದ. ಆತ ಒಂದು ವಿಶಿಷ್ಟಶಕ್ತಿಯನ್ನು ವಶಪಡಿಸಿಕೊಂಡಿದ್ದ. ಅದೇ ಎದುರಿಗಿರುವವರ ಮನಸ್ಸನ್ನು ಓದುವ ಕಲೆ. ಒಮ್ಮೆ ಒಬ್ಬನು ಅವನ ಬಳಿಗೆ ಹೋಗಿ ಆತನನ್ನು ''ನನ್ನ ಮನದಲ್ಲಿ ಈಗ ಏನು ನಡೆಯುತ್ತಿದೆ?'' ಎಂದು ಪ್ರಶ್ನಿಸಿದ. ಅದಕ್ಕೆ ಆ ವ್ಯಕ್ತಿ, ''ನಿನ್ನ ಪುಟ್ಟ ಮಗು ಅಳುತ್ತಾ ಇದೆ. ಆ ಪುಟ್ಟ ಮಗುವಿನ ಬಗ್ಗೆಯೇ ನೀನು ಚಿಂತಿಸುತ್ತಿದ್ದೆ'' ಎಂದು ಉತ್ತರ ಕೊಟ್ಟ. ಅದನ್ನು ಕೇಳಿದ ಕೇಳುಗನು ಚಕಿತನಾದ. ಸ್ವಾಮೀಜಿ ಇನ್ನೊಂದು ಉದಾಹರಣೆಯನ್ನು ಕೊಡುತ್ತಾರೆ. ಒಬ್ಬ ಹುಟ್ಟು ಕುರುಡನೂ ಕೂಡ ಹಲವಾರು ಆಸೆ, ಆಕಾಂಕ್ಷೆ, ದುಃಖ, ಪ್ರೀತಿ, ಪ್ರೇಮಗಳ ಭಾವವನ್ನು ಅನುಭವಿಸುತ್ತಾನೆ ಎಂದರೆ ಮನಸ್ಸೆಂಬುದು ಅದೆಷ್ಟು ಜಾಗೃತವೆಂದು ತಿಳಿಯಬಹುದು. ಮುಂದುವರಿದು ಸ್ವಾಮೀಜಿ, ''ಈ ಮನಸ್ಸು ವಿಶ್ವಮನಸ್ಸಿನ ಒಂದು ಅಂಶ. ಹಾಗಾಗಿ ಒಂದು ಮನಸ್ಸಿಗೂ ಇನ್ನೊಂದು ಮನಸ್ಸಿಗೂ ವಿಶಿಷ್ಟವಾದ ಸಂಬಂಧವಿದೆ'' ಎಂದು ಹೇಳುತ್ತಾರೆ. ಆಚಾರ್ಯ ಶಂಕರರು ''**ಮನೋಮಯಾಗ್ನಿರ್ದಹತಿ ಪ್ರಪಂಚಂ**'' – ಮನಸ್ಸೆಂಬ ಅಗ್ನಿಯು ಪ್ರಪಂಚವನ್ನು ಸುಡುವಷ್ಟು ಶಕ್ತಿಯುತವಾದುದು ಎಂದು ತಿಳಿಸುತ್ತಾರೆ. ಮನಸ್ಸೆಂಬುದು ಜಾಗೃತಗೊಳಿಸಬೇಕಾದ ಶಕ್ತಿ. ಭಾರತೀಯ ಸನಾತನ, ಆಧ್ಯಾತ್ಮಿಕ, ಐತಿಹಾಸಿಕ ಪರಂಪರೆಯಲ್ಲಿ ಯೋಗ, ಧ್ಯಾನ ಮುಂತಾದವುಗಳಿಗೆ ಮಹತ್ವದ ಸ್ಥಾನವಿದೆ. ಅವುಗಳ ಸಾಧನೆಯ ಸಾಧನವಾಗಿ ಮನಸ್ಸು ನಿಲ್ಲುತ್ತದೆ. '**ಆತ್ಮಾನಂ ರಥಿನಂ ವಿದ್ಧಿ**' ಎಂದು ಪ್ರಾರಂಭವಾಗುವ ಕಠೋಪನಿಷತ್ತಿನ ಮಂತ್ರವು ''**ಮನಃ ಪ್ರಗ್ರಹಮೇವ ಚ**'' ಎಂಬುದಾಗಿ ಮನೋನಿಗ್ರಹವನ್ನು, ಅದರ ಶಕ್ತಿಯನ್ನು ಪ್ರತಿಪಾದಿಸುತ್ತದೆ. ಜ್ಞಾನದ ಪ್ರಾಪ್ತಿಗೆ ಮನಸ್ಸೇ ಸಾಧನ; ಅದನ್ನು ನಿಗ್ರಹಿಸುವುದೇ ಯೋಗ ಎಂದು ಪತಂಜಲಿಯ ಯೋಗಸೂತ್ರವು ತಿಳಿಸುತ್ತದೆ. ವಚನಕಾರ ಷಣ್ಮುಖಸ್ವಾಮಿ ಒಂದು ವಚನದಲ್ಲಿ,

**ಮನವೆಂಬ ಮರ್ಕಟನು, ತನುವೆಂಬ ವೃಕ್ಷವನೇರಿ,**
**ಇಂದ್ರಿಯಗಳೆಂಬ ಶಾಖೆ ಶಾಖೆಗೆ ಹಾರಿ**
**ವಿಷಯಂಗಳೆಂಬ ಫಲಂಗಳ ಗ್ರಹಿಸಿ**
**ಭವದತ್ತ ಮುಖವಾಗಿ ಹೋಗುತಿದೆ ನೋಡಾ ॥**
**ಈ ಮನವೆಂಬ ಮರ್ಕಟನ ನಿನ್ನ ನೆನಹೆಂಬ ಪಾಶದಿ ಕಟ್ಟಿ**
**ಎನ್ನನುಳಿಸಿಕೊಳ್ಳಯ್ಯ ಅಖಂಡೇಶ್ವರಾ ॥**

– ಎಂಬುದಾಗಿ ಮನಸ್ಸಿನ ಜಾಗೃತಸ್ಥಿತಿಯನ್ನು ವಿವರಿಸುತ್ತಾನೆ. ಹೀಗೆ ಮಹಾತ್ಮರ, ಶಾಸ್ತ್ರದ, ವೇದಗಳ ಸಾರವನ್ನು ಗ್ರಹಿಸಿಕೊಂಡು, ನಾವು ಪುರಂದರದಾಸರು ಹೇಳುವಂತೆ ''ಮನದಾ ಮುಸುರೆ ತೊಳೆಯಬೇಕು, ಮನಸಿನಾ ಮುಸುರೆ ತೊಳೆಯಬೇಕು. ಪ್ರತಿ ದಿನವೂ ಭಗವಂತನ ನಾಮವೆಂಬ ಪ್ರೇಮನದಿಯಲಿ ನಮ್ಮ ಮನವನ್ನು, ಮನದ ಕೊಳೆಯನ್ನು ತೊಳೆದು ಅದನ್ನು ಸತ್‌ವಿಚಾರಗಳಲ್ಲಿ ಜಾಗೃತಗೊಳಿಸಬೇಕು.'' *

## ಸ್ವರ್ಗ ಮತ್ತು ನರಕ

ಒಬ್ಬ ಝೆನ್ ಗುರುವಿದ್ದ. ಅವನ ಬಳಿಗೆ ಒಬ್ಬ ಸಮುರಾಯಿ (ಜಪಾನೀ ಯೋಧ) ಬಂದ. ''ನಿಜವಾಗಿಯೂ ಸ್ವರ್ಗ, ನರಕಗಳಿವೆಯೆ? ನನಗೆ ತಿಳಿಸಿಕೊಡಿ'' ಎಂದ. ''ನೀನಾರು?'' ''ನಾನು ನಬುಶಿಗೆ, ಸಮುರಾಯಿ.'' ''ಓ, ನೀನು ಮಹಾಕ್ರೂರಿ, ಉಳಿದವರನ್ನು ಹಿಂಸಿಸಿದ್ದೀಯ, ಎಷ್ಟೋ ಜನರನ್ನು ಕೊಂದಿದ್ದೀಯಾ. ಸ್ವರ್ಗ, ನರಕ ನಿನಗೇನು ತಿಳಿದೀತು? ನಿನ್ನ ಮುಖ ನೋಡಬಾರದೆ? ಅಯೋಗ್ಯ, ಎಷ್ಟು ಕೊಳಕಾದ ಬಟ್ಟೆ ತೊಟ್ಟಿದ್ದೀಯ ನೋಡು? ಅಸಂಬದ್ಧ ಪ್ರಶ್ನೆ ಹಾಕದೆ ಇಲ್ಲಿಂದ ಹೊರಟುಹೋಗು'' ಎಂದ ಝೆನ್ ಗುರು.

ನಬುಶಿಗೆ ಕೋಪ ನೆತ್ತಿಗೇರಿತು. ತನ್ನ ಖಡ್ಗವನ್ನು ಒರೆಯಿಂದ ಹೊರಗೆಳೆದ. ಅವನ ಕಣ್ಣುಗಳು ಕೆಂಡವಾಗಿದ್ದವು. ಇನ್ನೇನು, ಝೆನ್ ಗುರು ತಲೆ ಉರುಳಬೇಕು. ಅಷ್ಟರಲ್ಲಿ ಆತ ಅವನನ್ನು ತಡೆದು, ''ಓ, ಇದೇ ನೋಡು, ನರಕದ ದ್ವಾರ!'' ಎಂದ.

ಸಮುರಾಯಿ ಹಿಂದಕ್ಕೆ ಹೆಜ್ಜೆಯಿಟ್ಟ. ಸಾವಿನ ಅಂಚಿನಲ್ಲೂ ಶಾಂತನಾಗಿದ್ದ ಗುರು, ತನಗೆ ಈ ರೀತಿ ಪಾಠ ಕಲಿಸಿದನೆ? ಒಂದು ಕ್ಷಣ ತಡೆದು ಚಿಂತಿಸಿದ, ಶಾಂತನಾದ ನಬುಶಿಗೆ. ತಾನೇನು ಮಾಡಹೊರಟಿದ್ದೆ! ಈತನ ವಧೆಯಾಗುತ್ತಿತ್ತಲ್ಲ! ಪಶ್ಚಾತ್ತಾಪ ಉಕ್ಕಿಬಂದು, ಅವನ ಕಣ್ಣುಗಳಿಂದ ನೀರು ಸುರಿಯತೊಡಗಿತು. ಗುರುವಿನ ಕಾಲಿಗೆ ಬಿದ್ದ ನಬುಶಿಗೆ. ಝೆನ್ ಗುರು ಶಾಂತವಾಗಿ, ''ಆಹಾ, ಈಗ ಸ್ವರ್ಗದ ಬಾಗಿಲು ತೆರೆಯಿತು ನೋಡು!'' ಎಂದ. *

ವಿಶೇಷ ಲೇಖನ


# ಸಾಧುವೊಬ್ಬನ ಚೀನಾ ಪರ್ಯಟನೆ

**ಭಾಗ ೩**

ಇಂಗ್ಲಿಷ್ ಮೂಲ: **ಸ್ವಾಮಿ ದುರ್ಗಾನಂದ**

ಅನುವಾದ: **ಪ್ರೊ . ಕೆ.ಬಿ. ಪ್ರಭುಪ್ರಸಾದ್**





## ಬೌದ್ಧ ಧರ್ಮ

**ಬೌ**ದ್ಧಧರ್ಮದಲ್ಲಿ ಮೂರು ಶಾಖೆಗಳಿವೆ : ಥೇರವಾದ, ಮಹಾಯಾನ, ಮತ್ತು ವಜ್ರಯಾನ. ಥೇರವಾದ ಶ್ರೀಲಂಕಾ, ಬರ್ಮಾ, ಮತ್ತು ಥ್ಯಾಲ್ಯಾಂಡ್ ದೇಶಗಳಲ್ಲಿ ಜನಪ್ರಿಯವಾದುದು. ಮಹಾಯಾನ ಚೀನಾ, ಜಪಾನ್ ಮತ್ತು ಕೊರಿಯಾ ದೇಶಗಳಲ್ಲಿ , ವಜ್ರಯಾನ ಟಿಬೆಟ್, ಚೀನಾ ಮತ್ತು ಜಪಾನ್‌ಗಳಲ್ಲಿವೆ.

ಥೇರವಾದ ಬೌದ್ಧಧರ್ಮದ ಅತ್ಯಂತ ಪ್ರಾಚೀನ ಶಾಖೆ. ಮಹಾಯಾನ ಪ್ರಾಯಶಃ ಕೆಲವು ಕೊರತೆಗಳನ್ನು ತುಂಬಲು ಹುಟ್ಟಿಕೊಂಡಿರಬೇಕು (ಬ್ರಹ್ಮಚಾರಿ, ಭಿಕ್ಷುಗಳಲ್ಲದವರಿಗೆ). ಸಾಮಾನ್ಯರಿಗೆ ಬೌದ್ಧಧರ್ಮದ ಗಹನ ತತ್ತ್ವಗಳನ್ನು ಸರಳಗೊಳಿಸಿ ಹೇಳಲು ಮತ್ತು ಶ್ರದ್ಧೆ-ಭಕ್ತಿಗಳನ್ನು ಹೆಚ್ಚಿಸಲು ಈ ಶಾಖೆ ರೂಪುಗೊಂಡಿರಬೇಕು. ಮಹಾಯಾನದ ತತ್ತ್ವಗಳ ಪ್ರಕಾರ ವಿಕಾಸಗೊಂಡ ಆತ್ಮವು (ಬೋಧಿಸತ್ವ) ತನ್ನ ಸ್ವಂತದ ನಿರ್ವಾಣವನ್ನು ಸ್ವ-ಇಚ್ಛೆಯಿಂದ ಮತ್ತು ಸಂತೋಷದಿಂದ ಬದಿಗಿಟ್ಟು, ಇತರರು ಸಂಸಾರ ಸಾಗರವನ್ನು ದಾಟಲು ಸಹಾಯ ಮಾಡುವುದು ಮುಖ್ಯ ಎಂದು ತಿಳಿದಿರುತ್ತದೆ. ಅಲ್ಲದೆ ತಾನು ತನ್ನ ಸತ್ಕರ್ಮಗಳಿಂದ ಗಳಿಸಿದ ಪುಣ್ಯವನ್ನು ಪತಿತರಿಗೆ ವರ್ಗಾಯಿಸಿ, ಅವರನ್ನು ಅವರ ಕರ್ಮಗಳಿಂದ ಮುಕ್ತಗೊಳಿಸುವುದು ಅನುಕಂಪವಷ್ಟೇ ಅಲ್ಲ, **ಮಹಾಕರುಣ** ಎಂದೆನಿಸಿಕೊಳ್ಳುತ್ತದೆ.

ಮೂರನೆಯದಾದ ವಜ್ರಯಾನ ಒಂದು ವಿಧವಾದ ನಿಗೂಢ ತತ್ತ್ವದ ಶಾಖೆ. ಇದು ದೀಕ್ಷೆ ಪಡೆದವರಿಗೆ ಮಾತ್ರ ತಿಳಿದಿರುವ ರಹಸ್ಯ. ಇದು ಕ್ರಿ.ಶ ೭ನೆ ಶತಮಾನದಲ್ಲಿ ಭಾರತದಲ್ಲಿ ಬೆಳೆದ ಧರ್ಮ. ಕ್ರಿ.ಶ. ೪ರಿಂದ ೬ನೇ ಶತಮಾನದ ಅವಧಿಯಲ್ಲಿ ಅಂದರೆ ಭಾರತದ ಸುವರ್ಣ ಯುಗದಲ್ಲಿ ಉಚ್ಛ್ರಾಯಗೊಂಡ ಈ ಶಾಖೆ, ತಂತ್ರಶಾಸ್ತ್ರವನ್ನು ಹೀರಿಕೊಂಡಿತ್ತು. ಬೌದ್ಧಧರ್ಮ ಹೋದ ರೇಷ್ಮೆ ಮಾರ್ಗ( route silk) ವಾಗಿ ಇದು ಚೀನಾದೇಶಕ್ಕೆ ಹೋಯಿತು.

ಚೀನಾದ ಬೌದ್ಧ ದೇವಾಲಯಗಳಲ್ಲಿ ಆರಾಧಿಸಲ್ಪಡುವ ದೇವರುಗಳೆಂದರೆ ಪದ್ಮಾಸನ ಭಂಗಿಯಲ್ಲಿ ಕುಳಿತ ಬುದ್ಧ ಮತ್ತು ಮೈತ್ರೇಯ, ಸ್ಕಂದ, ಮಹಾಸ್ಥಾಮ ಪ್ರಾಪ್ತ, ಗುವಾನ್‌ಯಿನ್ ಎಂಬ ಬೋಧಿಸತ್ವ ರೂಪಗಳ ವಿಗ್ರಹಗಳು. ಗುವಾನ್ಯಿನ್('ಲೋಕದ ನಾದಗಳನ್ನು ಅವಲೋಕಿಸುವ' ಎಂದು ಅಕ್ಷರಶಃ ಅರ್ಥ) ಬೋಧಿಸತ್ವ , ಅವಲೋಕಿತೇಶ್ವರನ ಸ್ತ್ರೀರೂಪ, ದಯೆ ಅನುಕಂಪಗಳ ಪ್ರತೀಕ. ಚೀನಾದ ಅನೇಕ ಕಡೆ ಮೈ ತುಂಬಿ ಪ್ರವಹಿಸುವಂತೆ ಹೊದ್ದಿರುವ, ಶ್ವೇತವಸ್ತ್ರಧಾರಿಣಿಯಾದ ಸುಂದರಿಯು ಅಭಯ ಹಾಗೂ ವರದ ಹಸ್ತದಲ್ಲಿ, ಆಶೀರ್ವದಿಸುತ್ತಿರುವ ಭಂಗಿಯಲ್ಲಿರುವ ಚಿತ್ರ ಅಥವಾ ಶಿಲ್ಪ ಇರುವುದನ್ನು ಕಾಣುತ್ತೇವೆ.

ಚೀನಾದಲ್ಲಿ ನಾಲ್ಕು ಪ್ರಸಿದ್ಧ ತೀರ್ಥಕ್ಷೇತ್ರಗಳಿವೆ. (ಬೋಧಿ ಮಂಡಾಸ್ ಎಂದು ಕರೆಯುತ್ತಾರೆ) ಇವೆಲ್ಲವೂ ಬೆಟ್ಟಗಳ ಮೇಲೆ, ೧೫೦೦ ಕಿ.ಮೀ. ಅಂತರಗಳಲ್ಲಿವೆ. ಪ್ರಾಮುಖ್ಯತೆಯಲ್ಲಿ, ಆವರಣದಲ್ಲಿ, ಪೂಜ್ಯತೆಯಲ್ಲಿ ಈ ನಾಲ್ಕೂ ಸಮಸಮವಾಗಿವೆ – ಭಾರತದ ಚತುರ್ಧಾಮಗಳಂತೆ. ಒಂದು ಪೂರ್ವಭಾಗದಲ್ಲಿರುವ ಪುಟುವೊ ಗಿರಿ; ಇನ್ನೊಂದು ಪಶ್ಚಿಮ ಭಾಗದಲ್ಲಿರುವ ಇಮೈ; ಉತ್ತರದಲ್ಲಿ ವುಟಾಯ್‌ಗಿರಿ; ದಕ್ಷಿಣದಲ್ಲಿ ಜಿಯುವುಹ. ಕ್ರಮವಾಗಿ ಅವಲೋಕಿತೇಶ್ವರ, ಸಮಂತಭದ್ರ, ಮಂಜುಶ್ರೀ, ಮತ್ತು ಕ್ಷಿತಿಗರ್ಭ ಈ ಗಿರಿಧಾಮಗಳ ದೇವರುಗಳು. ಈ ಲೇಖಕನು ಸಂದರ್ಶಿಸಿದ ಪುಟುವೊಗಿರಿಯ ಮತ್ತು ವುಟಾಯ್‌ಗಿರಿಯ ಬೋಧಿ ಮಂಡಗಳ ವಿಚಾರವನ್ನೀಗ ಬಣ್ಣಿಸಲಾಗುತ್ತದೆ.

### ಪುಟುವೊ ಗಿರಿಧಾಮ

೭ ಕಿ.ಮೀ. ಉದ್ದದ ಮತ್ತು ೨.೫ ಕಿ.ಮೀ ಅಗಲದ ದ್ವೀಪವೊಂದರಲ್ಲಿ ಈ ಗಿರಿ ಇದೆ. ಇದು ಷಾಂಘ್ಞಾ ನಗರದ ಆಗ್ನೇಯ ದಿಕ್ಕಿನಲ್ಲಿ ೨೦೦ ಕಿ.ಮೀ. ದೂರದಲ್ಲಿದೆ. ಷಾಂಘ್ಞಾಯಿಂದ ಈ ಗಿರಿಗೆ ಹೋಗಲು ಗಂಟೆಗೆ ೮೦ ಕಿ.ಮೀ. ವೇಗವಾಗಿ ಚಲಿಸುವ ದೋಣಿಗಳಿವೆ. ಕೊಂಚ ಸುತ್ತಿಕೊಂಡು ಹೋಗುವ ಆರು ಪಥ (track)ಗಳ ಹೆದ್ದಾರಿಯೂ ಇದೆ. ದಾರಿಯುದ್ದಕ್ಕೂ ಸುಂದರ ನಿಸರ್ಗ ನೋಟಗಳಿವೆ. ನೋಡುತ್ತಾ ಆನಂದವಾಗಿ ಪಯಣಿಸಬಹುದು. ಈ ಲೇಖಕ ಈ ರಸ್ತೆಯ ಮಾರ್ಗವಾಗಿಯೇ ಹೋದ. ದಾರಿಯಲ್ಲಿ ಜೌಗು ಪ್ರದೇಶ, ಅನೇಕ ಸರೋವರಗಳು, ಗದ್ದೆಗಳು, ಕಾಡುಗಳು ಸಿಗುತ್ತವೆ. ಅವನ್ನು ನೋಡುತ್ತ ಆನಂದಿಸಬಹುದು. ಹ್ಯಾಂಗ್ ಝೌ ಕೊಲ್ಲಿ ಚೀನಾದ ಪೂರ್ವದ ಕಡಲಿನ ಭಾಗ. ೬ (Lanes) ಪಥಗಳುಳ್ಳ ೩೫ ಕಿ.ಮೀ. ಉದ್ದ ಸೇತುವೆಯ ಮೇಲೆ ಪಯಣಿಸಿ ಕೊಲ್ಲಿಯನ್ನು ದಾಟಬೇಕು. ಸಾಗರದ ಮೇಲಿನ ಈ ಸೇತುವೆ ಜಗತ್ತಿನಲ್ಲೇ ಅತ್ಯಂತ



ಗ್ಯಾನ್‌ಯಿನ್ (ಅವಲೋಕಿತೇಶ್ವರಿ) ಪ್ರತಿಮೆ, ಪುಟುವೊ ಗಿರಿ

ಉದ್ದನೆಯ ಸೇತುವೆ.[೧] ಇದರ ಮೇಲೆ ಹೋದರೆ ದ್ವೀಪದೊಳಗಿನ ಗಿರಿಗೆ ಸೇರಬಹುದು. ಎಡ-ಬಲ ಎರಡೂ ಕಡೆ ನಿಸರ್ಗ ದೃಶ್ಯ ಅತ್ಯಂತ ಮನೋಹರವಾಗಿದೆ. ನೋಡುತ್ತ ಮನಸ್ಸು ಊರ್ಧ್ವಾಭಿಮುಖವಾಗಿ ಪಯಣಿಸುತ್ತದೆ.

೯ನೇ ಶತಮಾನದಲ್ಲಿ ಒಬ್ಬ ಜಪಾನಿ ಸಾಧು ವುಟಾಯ್‌ನಿಂದ ಗ್ಯಾನ್‌ಯಿನ್‌ನ ವಿಗ್ರಹವನ್ನು ಜಪಾನ್‌ಗೆ ಒಯ್ಯುತ್ತಿದ್ದನಂತೆ. ಸಮುದ್ರವನ್ನು ದಾಟಲು ಈ ದ್ವೀಪಕ್ಕೆ ಬಂದಾಗ ಪ್ರಚಂಡವಾದ ಬಿರುಗಾಳಿ ಎದ್ದಿತಂತೆ. ಗ್ಯಾನ್‌ಯಿನ್ ಪ್ರತ್ಯಕ್ಷಳಾಗಿ, ತನ್ನನ್ನು ಅಲ್ಲೇ ಬಿಟ್ಟು ಹೋಗಲು ಹೇಳಿದಳಂತೆ. ಆತ ಅದಕ್ಕೆ ಒಪ್ಪಿದ ಕೂಡಲೇ ಬಿರುಗಾಳಿ ನಿಂತುಹೋಯಿತಂತೆ. ಆಗ ಅವನು ಅಲ್ಲಿಯೆ ಆಕೆಗೊಂದು ದೇವಾಲಯ ಕಟ್ಟಿದನಂತೆ. ಅದೇ ಸ್ಥಳದಲ್ಲೀಗ 'ಮಠವನ್ನು ಬಿಟ್ಟು ಹೋಗಲು ನಿರಾಕರಿಸಿದ ದೇವಿ' ನೆಲೆಸಿದ್ದಾಳೆ. ಸಾಧುವಿಗೆ ದೇವಿ ಕಾಣಿಸಿಕೊಂಡ ಗುಹೆ ಇಲ್ಲಿಯೇ ಸಮೀಪದಲ್ಲಿದೆ. ಈ ದ್ವೀಪದಲ್ಲಿ ೩೦ ಮುಖ್ಯ ದೇವಾಲಯಗಳೂ ೫೦ ಮಠಗಳೂ ಇವೆ. ೨೦ ಮೀಟರ್ ಎತ್ತರದ ಗ್ಯಾನ್‌ಯಿನ್ ದೇವಿಯ ಕಂಚಿನ ಪ್ರತಿಮೆ, ೧೩ ಮೀಟರ್ ಎತ್ತರದ ಪೀಠದ ಮೇಲೆ ವಿರಾಜಮಾನವಾಗಿರುವುದು ನೋಡತಕ್ಕ ನೋಟವಾಗಿದೆ. ಪುಟುವೊ ದ್ವೀಪ ಭಕ್ತಿ ಭಾವತರಂಗಿತವಾಗಿದೆ. ದ್ವೀಪದಲ್ಲಿ ಎಲ್ಲಿಗೆ ಹೋದರೂ ಮನಸ್ಸು ಉನ್ನತ ಸ್ತರಕ್ಕೇರುತ್ತದೆ. ಯಾತ್ರಿಕರು ದೇಗುಲದಿಂದ ದೇಗುಲಕ್ಕೆ ಹೋಗುವುದು, ಭಕ್ತಿಯಿಂದ ಬಾಗಿ ನಮಸ್ಕರಿಸುವುದು, ಮೊಣಕಾಲೂರಿ ನಮಿಸುವುದು, ಊದುಬತ್ತಿ, ಧೂಪ ಹಚ್ಚುವುದು, ದೀಪಗಳನ್ನು ಬೆಳಗಿಸುವುದು, ತಮ್ಮ ತಮ್ಮ ಸಂಕಟ, ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸೆಂದು ಮೊರೆಯಿಡುವುದು, ಇವನ್ನು ನೋಡುತ್ತಿದ್ದರೆ ಹೃದಯ ಕರಗಿ ನೀರಾಗುವುದು.

## ವುಟಾಯ್ ಗಿರಿ

ಚೀನಾದ ನಾಲ್ಕು ಬೋಧಿ ಮಂಡಾಗಳಲ್ಲಿ ಇದು ಇನ್ನೊಂದು. ಇದು ಬೀಜಿಂಗ್ ನಗರದ ಪಶ್ಚಿಮಕ್ಕೆ ೪೦೦ ಕಿ.ಮೀ. ದೂರದಲ್ಲಿ ತೈಹಾಂಗ್ ಪರ್ವತಾವಳಿಯ ಮೇಲಿದೆ. ಸಮುದ್ರ ಮಟ್ಟದಿಂದ ೩ ಸಾವಿರ ಮೀಟರ್ ಎತ್ತರದಲ್ಲಿದೆ. ಮಂಜುಶ್ರೀ ಎಂಬ ಬೋಧಿಸತ್ವನಿಗೆ ಇದು ಸಮರ್ಪಿತವಾಗಿದೆ. ಬಯಲು ಸೀಮೆಯಿಂದ ೧೫೦ ಕಿ.ಮೀ ದೂರದಲ್ಲಿರುವ ಈ ಯಾತ್ರಾಸ್ಥಳ ೫೦ ಕಿ.ಮೀ ಉದ್ದದ ಮತ್ತು ೧೨ ಕಿ.ಮೀ. ಅಗಲದ ಕಣಿವೆ. ಸುತ್ತ ನಾಲ್ಕು ಹಂತಗಳ ಶಿಖರ ಪ್ರದೇಶಗಳಿವೆ. ಒಂದೊಂದು ಹಂತದ ಮೇಲೂ ದೇಗುಲಗಳಿವೆ.

೧. ಭಾರತದಲ್ಲಿನ ಅತ್ಯಂತ ಉದ್ದನೆಯ ಸೇತುವೆ ೫.೪ ಕಿ.ಮಿ ಉದ್ದದ ಬಾಂದ್ರಾ-ವೊರ್ಲಿ ಸಮುದ್ರದ ಸಂಪರ್ಕ ಸೇತುವೆಯಾಗಿದೆ.

ಈ ಬಗ್ಗೆ ಒಂದು ದಂತಕಥೆ ಇದೆ. ಹಾನ್ ರಾಜವಂಶದ ಚಕ್ರವರ್ತಿ ಮಿಂಗ್ ತನ್ನ ಕನಸಿನಲ್ಲಿ ಪ್ರಜ್ವಲವಾದ ಪ್ರಕಾಶ ಹೊಮ್ಮುತ್ತಿದ್ದ ದೇವತೆಯೊಬ್ಬನನ್ನು ನೋಡಿದ. ಅರಮನೆಯ ಮುಂದೆ ಆ ದೇವತೆ ಆಕಾಶದಲ್ಲಿ ಹಾರಿ ಹೋಗುತ್ತಿದ್ದ. ಮಾರನೆ ದಿನ ಬೆಳಿಗ್ಗೆ ಚಕ್ರವರ್ತಿ ತನಗಾದ ಕನಸನ್ನು ಆಸ್ಥಾನದಲ್ಲಿ ಹೇಳಿ, ''ಆ ದೇವತೆ ಯಾರಿರಬಹುದು?'' ಎಂದು ಮಂತ್ರಿಗಳನ್ನು ಕೇಳಿದ. ಅವರು, ''ಪ್ರಭೂ, ಭಾರತದಲ್ಲಿ ಬುದ್ಧದೇವ ಎಂಬ ಸೂರ್ಯಪ್ರಭೆ ಹೊಮ್ಮುವ ದೇಹವುಳ್ಳ, ಆಕಾಶದಲ್ಲಿ ಹಾರಬಲ್ಲ, ಭಗವಂತನೊಬ್ಬನು ಇದ್ದಾನೆಂದು ಕೇಳಿಬಲ್ಲೆವು. ಆ ದೇವತೆಯೇ ನಿಮಗೆ ಕನಸಿನಲ್ಲಿ ಕಂಡಿರಬೇಕು''[೨] ಎಂದು ಹೇಳಿದರು. ಚಕ್ರವರ್ತಿ ಕೂಡಲೇ ಪಂಡಿತರ ನಿಯೋಗವೊಂದನ್ನು ಭಾರತಕ್ಕೆ ಕಳಿಸಿದ. ಅವರು ಚೀನಾದ ರಾಜಧಾನಿ 'ಲೂಯೊಯಾಂಗ್'ಗೆ ಹಿಂದಿರುಗಿದರು. ಜೊತೆಗೆ ಇಬ್ಬರು ಭಿಕ್ಷುಗಳನ್ನು ಕರೆತಂದರು. ಆ ಭಿಕ್ಷುಗಳ ಹೆಸರು ಧರ್ಮರಕ್ಷ (ಝು ಫಲನ್) ಮತ್ತು ಕಶ್ಯಪಮತಂಗ (ಷೆ ಮೋತೆಂಗ್). ಅವರು ಒಂದು ಬಿಳಿಯ ಕುದುರೆಯ ಮೇಲೆ ಬೌದ್ಧ ಧರ್ಮದ ಗ್ರಂಥಗಳನ್ನಿಟ್ಟುಕೊಂಡು ಬಂದಿದ್ದರು. ತಮ್ಮ ಉಳಿದ ಜೀವನವನ್ನು ಅವರು ಆ ಗ್ರಂಥಗಳ ಭಾಷಾಂತರ ಮಾಡುತ್ತ ಚೀನಾದಲ್ಲೇ ಕಳೆದರು. ಬೌದ್ಧಧರ್ಮ ಚೀನಾದೇಶವನ್ನು ಮೊಟ್ಟ ಮೊದಲ ಬಾರಿಗೆ ಪ್ರವೇಶಿಸಿದ್ದು ಹೀಗೆ. ಕ್ರಿ.ಶ. ೬೮ರಲ್ಲಿ ಚಕ್ರವರ್ತಿ ಬೌದ್ಧ ಮಂದಿರವನ್ನು ಕಟ್ಟಿದ. ಅದಕ್ಕೆ **ಶ್ವೇತಾಶ್ವ ವಿಹಾರ** ಎಂಬ ಹೆಸರು



ದೇವಾಲಯ, ವುಟಾಯ್ ಗಿರಿ

ಬಂದಿತು. ರಾಜಧಾನಿ ಲೂಯೊಯಾಂಗ್‌ನಲ್ಲಿ ಅದು ಈಗಲೂ ಇದೆ. ಆ ಭಿಕ್ಷುಗಳ ದೈವೀತರಂಗಗಳು ಇಡೀ ವುಟಾಯಿ ಗಿರಿಯನ್ನು ಆವರಿಸಿದೆ. ಈ ಮಂಜುಶ್ರೀ ಬೋಧಿಸತ್ವನ ನೆಲೆಯಾಗಿದೆ. ವುಟಾಯಿಯ ಮೊದಲ ಬೌದ್ಧ ದೇಗುಲದ ಬಗ್ಗೆ ಇನ್ನೊಂದು ಜನಜನಿತವಾದ ಕಥೆಯಿದೆ. ಒಬ್ಬ ಬೌದ್ಧ ಭಿಕ್ಷು ಹಾನ್ ಚಕ್ರವರ್ತಿಯನ್ನು ವುಟಾಯಿಯಲ್ಲಿ ಒಂದು ಬೌದ್ಧ ದೇಗುಲವನ್ನು ಕಟ್ಟಿಸಲು ಕೇಳಿಕೊಳ್ಳುತ್ತಾನೆ. ಆಗ ಚೀನಾದೇಶದಲ್ಲಿ ತಾವೊ ಧರ್ಮ ಮಾತ್ರ ಇತ್ತು. ಹೊಸದಾಗಿ ಬಂದ ಬೌದ್ಧಧರ್ಮದ ವಿರುದ್ಧ ತಾವೊ ಧರ್ಮದವರು ಪ್ರತಿಭಟನೆ ಮಾಡಿದರು. ಆಗ ಚಕ್ರವರ್ತಿಯ ಸಮಕ್ಷಮದಲ್ಲಿ ಒಂದು ಅಗ್ನಿಕುಂಡ

೨. ಕುಮಾರ್, ಯುಕ್ತೇಶ್ವರ್ ಅವರ ***A History of Sino Indian Relations*** -1st Cent. AD to 7th Cent. AD, (New Delhi: APH Publishing, 2005), p.38, ಹಾಗೂ http://en.wikipedia.org/wiki/Chinese_Buddhism ನಲ್ಲಿ ಉಲ್ಲೇಖಿತವಾದ ಗ್ರಂಥ, ***Taoism and Chinese Religion,*** University of Massachusetts Press, tr. Kierman, Frank A. Jr, p. 402



ವುಟಾಯ್ ಗಿರಿಯ ಇನ್ನೊಂದು ನೋಟ

ಮಾಡಿ ತಾವೊ ಮತ್ತು ಬೌದ್ಧಧರ್ಮ ಗ್ರಂಥಗಳನ್ನು ಅಗ್ನಿಯಲ್ಲಿ ಹಾಕಿದರು. ತಾವೊ ಧರ್ಮದ ಗ್ರಂಥಗಳು ಸುಟ್ಟು ಬೂದಿಯಾದವು. ಬೌದ್ಧಧರ್ಮ ಗ್ರಂಥಗಳು ಸುಡದೆ ಸುರಕ್ಷಿತವಾಗಿದ್ದವು. ಆಗ ವುಟಾಯಿಯಲ್ಲಿ ಬೌದ್ಧರ ಮೊದಲ ದೇಗುಲವನ್ನು ಕಟ್ಟಿದರು. ಇದಕ್ಕೆ ಕ್ಸಿಯಾನ್‌ಟಾಂಗ್ ದೇಗುಲ ಎನ್ನುತ್ತಾರೆ. ಕ್ರಿ.ಶ. ೬೮ರಲ್ಲಿ ಇದು ನಿರ್ಮಾಣವಾಯಿತು. ಅನಂತರ ಒಂದು ಕಾಲದಲ್ಲಿ ಇಲ್ಲಿ ೩೬೦ ದೇಗುಲಗಳಿದ್ದವು. ಈಗ ೫೦ ಮಾತ್ರ ಉಳಿದಿವೆ. ಸುಮಾರು ೫೦ ವಿಹಾರಗಳಿವೆ. ಇವಲ್ಲದೆ ಗುಹೆಗಳು, ಬೆಟ್ಟಗಳು ಮತ್ತಿತರ ಧಾರ್ಮಿಕ ಕ್ಷೇತ್ರಗಳಿವೆ. ಬಹುತೇಕ ವುಟಾಯಿಯ ಮಧ್ಯೆ ಎನ್ನಬಹುದಾದ ಕಡೆ, 'ಸರೀರ' ಎಂಬ ಹೆಸರಿನ ಪ್ರಸಿದ್ಧ ಸ್ತೂಪವಿದೆ. ಇದರಲ್ಲಿ ಬುದ್ಧದೇವನ ಅವಶೇಷವೊಂದನ್ನು ಇರಿಸಿದ್ದಾರೆ. ವುಟಾಯಿಯಲ್ಲಿ ಪೂಜಿಸಲ್ಪಡುವ ದೇವರುಗಳೆಂದರೆ ಗ್ಯಾನ್‌ಯಿನ್ ಸೇರಿದಂತೆ ಮಂಜುಶ್ರೀ ಮತ್ತಿತರ ಬೋಧಿಸತ್ವರುಗಳು.

ಈ ಪವಿತ್ರ ಕ್ಷೇತ್ರವೆಲ್ಲ ಪ್ರಶಾಂತವಾಗಿದೆ. ಅಗಲವಾದ ರಸ್ತೆಗಳು, ವಿವಿಧ ಸೌಕರ್ಯಗಳು, ನೂತನ ಕಟ್ಟಡಗಳು, ಒಳ್ಳೆಯ ಸಾರಿಗೆ ವ್ಯವಸ್ಥೆ ಮತ್ತು ಪ್ರವಾಸಿಗರಿಗೆ ಬೇಕಾದ ಎಲ್ಲ ಇತರ ಸೌಕರ್ಯಗಳು ಇಲ್ಲಿವೆ. ಇದನ್ನು ನೋಡಲು ಬಂದವರು ಸಂತೋಷಪಡುತ್ತಾರೆ.

ವುಟಾಯಿಯ ಹಿಮಾವೃತ ಪರ್ವತಾವಳಿಯ ನೋಟ, ಸರೋವರಗಳು, ಅವುಗಳ ಸುತ್ತ ಕಲಾತ್ಮಕವಾಗಿ ಮಾಡಿದ ವಕ್ರವಕ್ರವಾದ ಕಾಲುದಾರಿಗಳು, ಉದ್ಯಾನ-ಹೂದೋಟಗಳು, ಕ್ಯಾಕ್ಟಸ್ ಗಿಡಗಳ ವನ, ರಸ್ತೆಗಳ ಇಕ್ಕೆಲಗಳಲ್ಲೂ ಸಾಲಾಗಿ ಇರುವ ಮರಗಳು ಇತ್ಯಾದಿಗಳೆಲ್ಲ ಮನೋಹರವಾಗಿವೆ. ಇವನ್ನು ನೋಡಿದಾಗ ಮನಸ್ಸು ಉನ್ನತ ನೆಲೆಗೇರುವುದು. ನಗರದಲ್ಲೂ ಪ್ರಶಾಂತ ವಾತಾವರಣ; ದೇಗುಲಗಳು ದೂರದೂರ ಹರಡಿಕೊಂಡಿವೆ. ಅನೇಕ ಸ್ಥಳಗಳಲ್ಲಿ ಧ್ಯಾನಕ್ಕೆ ತುಂಬ ಅವಕಾಶಗಳಿವೆ. ಮನಸ್ಸು ದೀರ್ಘಕಾಲ ಧ್ಯಾನಸ್ಥವಾಗಿರಲು ಈ ಪ್ರದೇಶ ಅನುಕೂಲಕರವಾಗಿದೆ.

## ಪೋಟಾಲ ಅರಮನೆ


ಸುಪ್ರಸಿದ್ಧವಾದ ಈ ಅರಮನೆಯನ್ನು ಟಿಬೆಟ್‌ನ ದೊರೆ ಸಾಂಗ್ತ್ಸೆನ್ ಗ್ಯಾಂಪೊ ಕ್ರಿ.ಶ. ೬೩೭ರಲ್ಲಿ ರಾಜಧಾನಿಯಾದ ಲ್ಹಾಸಾದಲ್ಲಿ ಕಟ್ಟಿಸಿದ. ಈ ಸುಭದ್ರವಾದ ಅರಮನೆ ೧ ಲಕ್ಷದ ೪೦ ಸಾವಿರ ಚದರ ಮೀಟರ್ ವಿಸ್ತಾರವಾದ ಪ್ರದೇಶದಲ್ಲಿದೆ, ಅದೂ ಒಂದು ಬೆಟ್ಟದ ಮೇಲೆ! ದಲ್ಾ ಲಾಮಾರ ನಿವಾಸ ೩೦೦ ಮೀಟರ್ ಎತ್ತರವಿರುವ ಕಟ್ಟಡ. ಕ್ರಿ.ಶ. ೧೩೯೧ರಲ್ಲಿ ಗೆಂಡುನ್ ಡ್ರುಪ್ ಎಂಬುವವರನ್ನು ಮೊದಲ ದಲ್ಾ ಲಾಮಾ ಎಂದು ಘೋಷಿಸಿದರು. ಅಂದಿನಿಂದ ದಲ್ಾ ಲಾಮಾರ ನಿವಾಸ ಈ ಅರಮನೆ. ಟಿಬೆಟ್ಟಿನ ಜನ ತುಂಬಾ ಧಾರ್ಮಿಕರಾಗಿರುವುದು ಅವರ ಇತಿಹಾಸದುದ್ದಕ್ಕೂ ಕಂಡು ಬರುತ್ತದೆ. ಅವರಿಗೆ ಗುರುಗಳ ಬಗ್ಗೆ ಎಷ್ಟು ಭಕ್ತಿ ಎಂದರೆ ಈಗಲೂ ಅವರು ಪೋಟಾಲ ಅರಮನೆಯನ್ನು ಒಂದಾದ ಮೇಲೊಂದರಂತೆ ಸತತವಾಗಿ ಸಾಷ್ಟಾಂಗ ಪ್ರಣಾಮ ಮಾಡುತ್ತ ಪ್ರದಕ್ಷಿಣೆ ಹಾಕುವುದನ್ನು ನೋಡಬಹುದು. ಇನ್ನು ಕೆಲವರು ಅರಮನೆಯ ಮುಂದೆ ನಿಂತು, ಎರಡೂ ಕೈಗಳನ್ನು ಮೇಲೆತ್ತಿ, ನಂತರ ಬಾಗಿ ದೀರ್ಘದಂಡ ನಮಸ್ಕಾರ ಮಾಡುವರು. ಹೀಗೆ ಅನೇಕ ಬಾರಿ ಮಾಡಿ ತಮ್ಮ ಭಕ್ತಿಯನ್ನು ವ್ಯಕ್ತಮಾಡುವರು. ಇದು ಬೆಳಿಗ್ಗೆ ೬ ಗಂಟೆಗೆ ಆರಂಭವಾದುದು ಮಧ್ಯಾಹ್ನ ಹನ್ನೆರಡರವರೆಗೆ ನಡೆಯುತ್ತಿರುತ್ತದೆ! ಈ ಪ್ರದೇಶದಲ್ಲಿ ಅನೇಕ ವಿಹಾರಗಳಿವೆ. ಸೆರಾ ವಿಹಾರವೂ ಇವುಗಳಲ್ಲೊಂದು. ಇದು ಉನ್ನತ ಶಿಕ್ಷಣದ ವಸತಿ ಸಹಿತವಾದ ಶಾಲೆ; ಚರ್ಚಾಕೂಟಗಳಿಗೆ ಪ್ರಸಿದ್ಧವಾದುದು.



ಪೋಟಾಲ ಅರಮನೆ

## ಯೂಂಗ್ಯಾಂಗ್ ಗುಹೆಗಳು

ಡಾಟಾಂಗ್‌ನಲ್ಲಿರುವ ಈ ಗುಹೆಗಳು ನಮ್ಮ ಎಲ್ಲೋರ ಗುಹೆಗಳಂತೆ. ಆದರೆ ಅಷ್ಟು ವಿಸ್ತಾರದ ಒಳಕೋಣೆಗಳಿಲ್ಲ. ಈ ಭಾಗಕ್ಕೆ ಬೌದ್ಧ ಧರ್ಮ ರೇಷ್ಮೆ ಮಾರ್ಗವಾಗಿ (silk route) ಬಂದು ಸೇರಿದಾಗ (ಕ್ರಿ.ಶ. ೪೬೦ರ ಸುಮಾರಿಗೆ) ಈ ಗುಹೆಗಳ ನಿರ್ಮಾಣ ಆರಂಭವಾಯಿತು. ಇದಕ್ಕೆ ಉತ್ತರದ 'ವೆ' ರಾಜಮನೆತನದವರ ಪೋಷಣೆ ದೊರೆಯಿತು. ಇಲ್ಲಿ ೨೫೨ ಗುಹೆಗಳಿವೆ. ೫೧ ಸಾವಿರಕ್ಕಿಂತಲೂ ಹೆಚ್ಚು ದೊಡ್ಡ ಹಾಗೂ ಸಣ್ಣ ವಿಗ್ರಹಗಳಿವೆ. ಇಲ್ಲಿ ಬುದ್ಧನ, ಬೋಧಿಸತ್ವರ ಮೂರ್ತಿಗಳನ್ನು, ಬುದ್ಧನ ಜೀವನದ ಘಟನೆಗಳನ್ನು ಭಿತ್ತಿಚಿತ್ರಗಳಲ್ಲಿ ಚಿತ್ರಿಸಿ ರಕ್ಷಿಸಿಟ್ಟಿದ್ದಾರೆ. ಈ ಭಿತ್ತಿಚಿತ್ರಗಳನ್ನು ಎಲ್ಲೋರಾ ಗುಹೆಗಳಲ್ಲಿರುವ ಭಿತ್ತಿಚಿತ್ರಗಳಿಗೆ ಹೋಲಿಸಿದರೆ, ಇವು ಅವುಗಳಷ್ಟು ಸ್ಪಷ್ಟವಾಗಿಲ್ಲ; ನವೆದು ಮಾಸಿ ಹೋಗಿವೆ. ಈ ಎರಡೂ ಬಹುಮಟ್ಟಿಗೆ ಒಂದೇ ಕಾಲಘಟ್ಟದಲ್ಲಿ ನಿರ್ಮಾಣವಾಗಿದ್ದರೂ ಈ ವ್ಯತ್ಯಾಸ ಅಚ್ಚರಿಯನ್ನುಂಟುಮಾಡುತ್ತದೆ. ಎಲ್ಲೋರಾ ಗುಹೆಗಳ ಬಂಡೆಗಳು ಕಾಲಾನಂತರ ಶೀತಲ ಲಾವಾರಸದಿಂದಾಗಿದ್ದು ಬಹುಕಾಲ ಗಟ್ಟಿಯಾಗಿರುವಂತಹವು. ಆದರೆ ಚೀನಾದಲ್ಲಿ ಇರುವ ಈ ಗುಹೆಗಳ ಭಿತ್ತಿ ಮರಳು





ಯೂಂಗ್ಯಾಂಗ್ ಗುಹೆಗಳು

ಶಿಲೆಗಳಿಂದ ನಿರ್ಮಿತವಾಗಿವೆ; ಅವು ನೀರಿನ ಅಡಿಯ ಹೂಳಿನಿಂದಾದ ಶಿಲೆಗಳು. ಅವು ಮೃದುವಾಗಿರುವುದರಿಂದ ಕ್ರಮೇಣ ಸವೆದು ಹೋಗಿರುವುದು ಸಹಜ.

ಚೀನಾದ ಪುಣ್ಯಕ್ಷೇತ್ರಗಳಲ್ಲಿ ನಾವು ಗಮನಿಸುವ ಒಂದು ಅಂಶವೆಂದರೆ, ಅಲ್ಲಿ ಒಂದು ಚೂರು ಕಸವಾಗಲಿ, ಕೊಳೆಯಾಗಲಿ, ತೇವವಾಗಲಿ ಇರುವುದಿಲ್ಲ. ಸ್ವಚ್ಛ ಹಾಗೂ ಆಧುನಿಕವಾಗಿರುತ್ತವೆ. ಸರಕಾರ ಎಲ್ಲ ಸೌಕರ್ಯ, ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ. ಮಂದಿರಗಳೂ ಪೂರ್ಣವಾಗಿ ಪ್ರಾಚೀನತೆಯನ್ನು ಉಳಿಸಿಕೊಂಡಿರುತ್ತವೆ. ಇಂಥ ಅನೇಕ ಸ್ಥಳಗಳು ಚಕಿತರಾಗುವಷ್ಟು ಸುಂದರವಾಗಿವೆ. ಅಂದವಾಗಿ, ಅಚ್ಚುಕಟ್ಟಾಗಿರುವ ದಂಡೆಗಳಿಂದ ಕೂಡಿದ ಸರೋವರಗಳು ಮನಸೆಳೆಯುತ್ತವೆ. ಬಂಡೆಗಳಲ್ಲಿ ಮಾಡಿರುವ ಕೃತಕ ಗುಹೆಗಳು, ಉಪವನಗಳು, ಸೇತುವೆಗಳು, ಪ್ರವಾಸಿಗರು ಉಲ್ಲಸಿತರಾಗಿ ಓಡಾಡಬಹುದಾದ ವಕ್ರಾಕಾರದ ಹಾಗೂ ಕಲಾತ್ಮಕವಾಗಿ ಕಾಣುವ ಕಾಲುದಾರಿಗಳು, ಹತ್ತಲು ಕಷ್ಟವಾದ ಬೆಟ್ಟದ ಎತ್ತರದ ಹಂತಗಳಿಗೆ ಹೋಗಲು ಅನುಕೂಲವಾದ ಕೇಬಲ್ ಕಾರುಗಳು, ಸುತ್ತುಬಳಸಿನ ರಸ್ತೆಯಲ್ಲಿ ಹೋಗಲು ಸರ್ಕಾರಿ ಸಾರಿಗೆ ವಾಹನಗಳು, ಎಲ್ಲವೂ ಒಳ್ಳೆಯ ಗುಣಮಟ್ಟದವುಗಳು. ಮನಸೆಳೆವ ನೈಸರ್ಗಿಕ ಸೌಂದರ್ಯ, ಮನಸ್ಸು ಊರ್ಧ್ವಗಾಮಿಯಾಗುವಂತಹ ಆಧ್ಯಾತ್ಮಿಕ ವಾತಾವರಣ ಈ ಕ್ಷೇತ್ರಗಳಲ್ಲಿ ಸಂಗಮಿಸಿವೆ.

ಸ್ಥಳಮಿತಿಯಿಂದಾಗಿ ಇನ್ನೂ ಹಲವಾರು ಮುಖ್ಯ ಧಾರ್ಮಿಕ ಸ್ಥಳಗಳನ್ನು ವಿವರಿಸಲಾಗುತ್ತಿಲ್ಲ. ಉದಾಹರಣೆಗೆ ನಿಂಗ್‌ಬೋದ ಅಶೋಕ ದೇಗುಲ, ಲಿಂಗ್‌ಯಿನ್ ವಿಹಾರ (ಕ್ರಿ.ಶ. ೩೨೮ರಲ್ಲಿ ಹಾಂಗ್ ಝೌನಲ್ಲಿ ಭಾರತದ ಭಿಕ್ಷುವೊಬ್ಬ ಸ್ಥಾಪಿಸಿದುದು), ವುಕ್ಸಿಯಲ್ಲಿನ ಲಿಂಗ್ ಷಾನ್ ಬೌದ್ಧವಿಸ್ಮಯ ಜಗತ್ತು (ಬೌದ್ಧ ಧರ್ಮದ ಸಮೃದ್ಧ ಪ್ರದರ್ಶನ), ಸೆರಾ ವಿಹಾರ (ಟಿಬೆಟ್‌ನ ಜೆಲುಪಾ ವಿಶ್ವವಿದ್ಯಾನಿಲಯದ ಮಂದಿರ), ಚೊಂಗ್‌ಕ್ವಿಂಗ್ ಸಮೀಪದ ಫೆಂಗ್‌ಡು ಡಿಯು (‘ನರಕ ’) ನಗರ ಇತ್ಯಾದಿ. ಇಲ್ಲೆಲ್ಲ ಭಾರತದ ಪರಿಭಾಷೆಯನ್ನೇ ಬಳಸಲಾಗಿದೆ. ಪರಿಕಲ್ಪನೆಗಳು ಹಾಗೂ ಸಂಸ್ಕೃತಿ ಕೂಡ ಪ್ರಾಚೀನ ಭಾರತದ್ದೇ ಆಗಿವೆ.

ಚೀನಾದ ಧಾರ್ಮಿಕ ಧ್ರುವೀಕರಣವನ್ನು ಈ ಕೆಳಕಂಡಂತೆ ಸಾರಾಂಶಗೊಳಿಸಬಹುದು: ೧) ಕನ್ಫ್ಯೂಷಿಯನ್ ಧರ್ಮ ಈಗಲೂ ಸಾಮಾಜಿಕ-ರಾಜಕೀಯ ತತ್ತ್ವವಾಗಿ ಉಳಿದಿದೆಯೇ ವಿನಃ ಆಧ್ಯಾತ್ಮಿಕ ಅಥವಾ ದೈವೀ ಅಂಶಗಳಿಂದಲ್ಲ. ೨) ತಾವೋ ಧರ್ಮ ಬೌದ್ಧಧರ್ಮದ ಅನೇಕ ಅಂಶಗಳನ್ನು ಹೀರಿಕೊಂಡು ತನ್ನದನ್ನಾಗಿಸಿಕೊಂಡಿದೆ. ಆದರೂ ಅದು ತನ್ನದೇ ಆದ ಆಂತರಿಕ ಆಧ್ಯಾತ್ಮಿಕ ಅಂಶಗಳು, ಕ್ಷುದ್ರ ದೈವಾರಾಧನೆ, ಮೂಢನಂಬಿಕೆ, ಅಂಧಶ್ರದ್ಧೆ, ಭೂತೋಚ್ಚಾಟನೆ, ಮಂತ್ರವಿದ್ಯೆಗಳಿಂದ ತುಂಬಿದೆ. ೩) ಹೀಗಾಗಿ ಚೀನಾದೇಶದಲ್ಲಿ ಬೌದ್ಧಧರ್ಮ, ಅದರಲ್ಲೂ ಮುಖ್ಯವಾಗಿ ಮಹಾಯಾನವೊಂದೇ ಪ್ರಮುಖ ಆಧ್ಯಾತ್ಮಿಕ ಧ್ಯೇಯವುಳ್ಳ ಧರ್ಮವಾಗಿದೆ.

## ಸಾರಾಂಶ ಮತ್ತು ಮುಕ್ತಾಯ

ಈ ಲೇಖಕ ತನ್ನ ಐದು ಚೀನಾ ಪ್ರವಾಸಗಳಲ್ಲಿ (ಒಂದೊಂದೂ ೩ರಿಂದ ೪ ವಾರಗಳ ಅವಧಿಯ ಪ್ರವಾಸ) ೪೦ ತೀರ್ಥಕ್ಷೇತ್ರಗಳಿಗೂ ೬೦ ಐತಿಹಾಸಿಕ, ಸಾಂಸ್ಕೃತಿಕ ಮಹತ್ವದ ಸ್ಥಳಗಳಿಗೂ ಭೇಟಿ ನೀಡಿದ್ದ.

ಈ ಕೆಳಗೆ ನಮೂದಿಸಿರುವ ಅವನ ತೀರ್ಮಾನಗಳಿಗೆ, ಆ ಸ್ಥಳಗಳ ಅವಲೋಕನ, ಅಲ್ಲಿ ಆದ ಅವನ ಅನುಭವ, ಮತ್ತು ಎಲ್ಲ ಕಡೆ ತೆಗೆದ ಫೋಟೋಗಳ ಪುನರ್‌ಪರಿಶೀಲನೆ ಆಧಾರವಾಗಿವೆ.

ಇತ್ತೀಚೆಗಷ್ಟೇ ಚೀನಾದೇಶ ಆಧುನೀಕರಣಗೊಂಡಿದೆ ಎಂಬುದನ್ನು ಈಗಾಗಲೇ ಪ್ರಸ್ತಾಪಿಸಿದೆ. ಇಲ್ಲಿನ ಕಟ್ಟಡಗಳು, ಸೌಧಗಳು ನೀಟಾಗಿವೆ, ಥಳಥಳಿಸುತ್ತವೆ. ಪಾದಚಾರಿ ಪಥಗಳು, ಸಾರ್ವಜನಿಕ ಶೌಚಾಲಯಗಳು, ಆಸರೆಯ ಹಿಡಿ ಕಂಬಿಗಳು (railings) ಸ್ವಚ್ಛವಾಗಿವೆ; ಹೊಸದೆಂಬಷ್ಟು ಸುಸ್ಥಿತಿಯಲ್ಲಿವೆ. ಉಪಾಹಾರ ಗೃಹಗಳು ಸ್ವಚ್ಛವಾಗಿರುವುದಲ್ಲದೆ ವಿಲಾಸಮಯವೂ ಆಗಿವೆ. ಆಧುನಿಕ ಪಾಕಶಾಲೆ, ಭೋಜನಶಾಲೆ ಇರುವುದಲ್ಲದೆ ಖಾದ್ಯಗಳ ಪಟ್ಟಿ, ಸೌಜನ್ಯದಿಂದ ವರ್ತಿಸುವ ಮಾಣಿಗಳು, ಮೆಚ್ಚುವಂತಹ ಸೇವೆ, ಹಣ ತೆಗೆದುಕೊಳ್ಳುವ ರೀತಿ ಎಲ್ಲ ಉತ್ತಮ ಶ್ರೇಣಿಯಲ್ಲಿವೆ. ಕೆಲವು ಮಾಲ್‌ಗಳಂತೂ ಸಾಮಾನ್ಯವಾಗಿ ಅಮೆರಿಕಾದಲ್ಲಿರುವ ಮಾಲ್‌ಗಳಿಗಿಂತ ಹೆಚ್ಚು ವಿಲಾಸದಿಂದ ಕೂಡಿವೆ. ಅತ್ಯಾಧುನಿಕ ಸೌಕರ್ಯಗಳ ಜೊತೆಗೆ ಅವುಗಳು ಶ್ರೀಮಂತವಾಗಿವೆ. ಸಾರ್ವಜನಿಕ ಸ್ಥಳಗಳಲ್ಲಿ , ರೈಲು ನಿಲ್ದಾಣಗಳಲ್ಲಿ ಮತ್ತು ದೊಡ್ಡ ದೊಡ್ಡ ಅಂಗಡಿಗಳಲ್ಲಿ ಎಸ್ಕಲೇಟರ್ಸ್ (ಸ್ವಯಂಚಾಲಿತ ಮೇಲೇರುವ ಮೆಟ್ಟಿಲುಗಳು) ಇವೆ. ದೂರದೂರುಗಳಿಗೆ ಹೋಗಿ ಬರುವ ಬಸ್ಸುಗಳು ಮತ್ತು ನಗರ ಸಾರಿಗೆ ಬಸ್ಸುಗಳು ಹೊಚ್ಚ ಹೊಸದಾಗಿ (ಹಳ್ಳಿಯ ಬಸ್ಸುಗಳೂ) ಸುಸ್ಥಿತಿಯಲ್ಲಿವೆ. ಪಾಶ್ಚಾತ್ಯ ದೇಶಗಳಲ್ಲಿರುವಂತೆಯೇ ಬಸ್‌ನಿಲ್ದಾಣಗಳು ವಿಮಾನ ನಿಲ್ದಾಣಗಳಂತಿವೆ. ಪೋಲಿಸ್ ಪಡೆಯೂ ಸಹ, ವೃತ್ತಿದಕ್ಷತೆಯಲ್ಲಿ, ಸಮವಸ್ತ್ರಗಳ ವಿಚಾರದಲ್ಲಿ , ಕಾರ್ಯಸಂಸ್ಕೃತಿಯಲ್ಲಿ ಶ್ರೇಷ್ಠಮಟ್ಟದ್ದಾಗಿದೆ. ರೈಲುಗಾಡಿಗಳಲ್ಲಿನ ಟಿಕೆಟ್ ತಪಾಸಣೆ ಅಧಿಕಾರಿಗಳು, ಬಸ್‌ಡ್ರೈವರ್‌ಗಳು, ಟ್ಯಾಕ್ಸಿ ಡ್ರೈವರ್‌ಗಳು ಮುಂದುವರಿದ ದೇಶಗಳಲ್ಲಿರುವಂತೆ ಟ್ರಿಮ್ ಆಗಿದ್ದಾರೆ. ಅಮೆರಿಕದಲ್ಲಿ ಪೋಲಿಸ್ ಅಧಿಕಾರಿಗಳು ಉಪಯೋಗಿಸುವಂತಹ (ಅದೇ ವಿನ್ಯಾಸ ಹಾಗೂ ಠೀವಿಯ) ಕಾರುಗಳನ್ನೇ ಇಲ್ಲಿನ ಪೋಲಿಸ್ ಅಧಿಕಾರಿಗಳು ಕರ್ತವ್ಯದ ಮೇಲಿದ್ದಾಗ ಬಳಸುತ್ತಾರೆ. ಮನರಂಜಕ ಅರಣ್ಯಧಾಮ-ಗಿರಿಧಾಮಗಳು ಮುಂದುವರಿದ ದೇಶಗಳ ಮಟ್ಟದಲ್ಲೇ ಇವೆ. ದೇಹದಾರ್ಢ್ಯ, ಶಕ್ತಿ, ಆರೋಗ್ಯ, ಮನೋಲ್ಲಾಸಗಳಿಂದ ಜನ ನೆಮ್ಮದಿಯಿಂದ ಇದ್ದಾರೆ. ಎಲ್ಲ ಕಡೆ ಮಾರ್ಗಸೂಚಿ ಬೋರ್ಡ್‌ಗಳಿವೆ, ಅವುಗಳೆಲ್ಲ ನೆಗ್ಗದೆ, ತುಕ್ಕು ಹಿಡಿಯದೆ, ಅಲಕ್ಷ್ಯಕ್ಕೆ ಒಳಗಾಗದೆ ಸುಸ್ಥಿತಿಯಲ್ಲಿವೆ.

ಸಾರ್ವಜನಿಕ ಉದ್ಯಾನ-ಉಪವನಗಳಲ್ಲಿ ಬೇಲಿ, ಗಿಡಗಳನ್ನು ಚೆನ್ನಾಗಿ ಬೆಳೆಸಿ ನೋಡಿಕೊಂಡಿದ್ದಾರೆ. ಆಲಂಕಾರಿಕ ಪೊದೆಗಳನ್ನು